

ದೇವಿ ಲಕ್ಷ್ಮಿಯು ದೇವಲೋಕವನ್ನು ಬಿಟ್ಟು ಹೊರಟು ಹೋದಳು. ಎಲ್ಲ ದೇವತೆಗಳು ಇಂದ್ರನನ್ನು ಮುಂದು ಮಾಡಿ ಕೊಂಡು ಈ ದುಃಖವನ್ನು ಹೋಗಲಾಡಿಸು ವುದಕ್ಕಾಗಿ ವಿಷ್ಣು ವಿನ ಬಳಿಗೆ ಹೋದರು. ಅವರಿಗೆ ಕ್ಷೀರಸಾಗರವನ್ನು ಕಡೆಯುವ ಸಲಹೆ ಸಿಕ್ಕಿತು. ಮಂದರ ಪರ್ವತವು ಕಡೆಗೋಲಾಯಿತು. ಅನಂತನಾಗವೇ ದೊಡ್ಡ ಹಗ್ಗವಾಯಿತು. ವಿಷ್ಣುವೇ ಆಮೆಯ ರೂಪವನ್ನು ತಾಳಿ ಮಂದರ ಪರ್ವತಕ್ಕೆ ಆಧಾರವಾದನು. ಅನೇಕ ವಿಚಿತ್ರ ವಸ್ತುಗಳು ಆ ಕಡೆಯುವಿಕೆಯಿಂದ ಹುಟ್ಟಿದವು. ಕೊನೆಗೆ ಲಕ್ಷ್ಮಿಯು ಹೊರಬಂದಳು. ದೇವತೆಗಳು ಸಂತಸದಿಂದ ಆಕೆ ಯನ್ನು ಪೂಜಿಸಿ ತಮ್ಮ ಬಳಿಯಲ್ಲಿಯೇ ಇರಲು ಹೇಳಿದಾಗ ಒಪ್ಪಿ ಕೊಂಡಳು. ಅವಳೇ ತ್ರಿಪುರಸುಂದರಿಯಾದಳು. ಮೂರೂ ಲೋಕದಲ್ಲಿ ಅವಳ ಸೌಂದರ್ಯವು ಪ್ರಖ್ಯಾತವಾದ್ದರಿಂದ ಆ ಹೆಸರು ಅವಳಿಗೆ ಬಂದಿತು. ಇವಳ ಶಿವನು 'ಸದಾಶಿವ ವಿಷ್ಣು'.

**ಕಾಂತ್ಯಾ ಕಾಂಚನಸಂನಿಭಾಂ ಹಿಮಗಿರಿಪ್ರಖ್ಯೈಶ್ಚತುರ್ಭಿರ್ಗಜೈ-**
**ರ್ಹಸ್ತೋತ್ಕ್ಷಿಪ್ತಹಿರಣ್ಮಯಾಮೃತಘಟೈರಾಸಿಚ್ಯಮಾನಾಂ ಶ್ರಿಯಮ್ ।**
**ಬಿಭ್ರಾಣಾಂ ವರಮಬ್ಜಯುಗ್ಮಮಭಯಂ ಹಸ್ತೈಃ ಕಿರೀಟೋಜ್ಜ್ವಲಾಂ**
**ಕ್ಷೌಮಾಬದ್ಧನಿತಂಬಬಿಂಬಲಲಿತಾಂ ವಂದೇರವಿಂದಸ್ಥಿತಾಮ್ ॥**

ಸುವರ್ಣದ ಕಾಂತಿಯನ್ನು ಹೊಂದಿರುವ, ಯಾರ ಮೇಲೆ ಹಿಮವಂತನ ಬಣ್ಣವಿರುವ ನಾಲ್ಕು ಆನೆಗಳು ತಮ್ಮ ಸೊಂಡಿಲುಗಳಿಂದ ಅಮೃತಕುಂಭಗಳಲ್ಲಿ ತುಂಬಿರುವ ಸುವರ್ಣವನ್ನೇ ಅವಳ ಮೇಲೆ ಸಿಂಪಡಿಸುತ್ತಾ ಇವೆಯೊ, ಯಾರು ತನ್ನ ಕೈಗಳಲ್ಲಿ ವರಮುದ್ರೆ, ಕಮಲಗಳನ್ನು ಧರಿಸಿರು ವಳೋ, ರೇಷ್ಮೆಯ ಸೀರೆಯಿಂದ ಒಪ್ಪುವ ಮೈಮಾಟವನ್ನು ಹೊಂದಿರುವ, ಕಮಲದ ಮೇಲೆ ಆಸೀನಳಾಗಿರುವ ಕಮಲೆ ಯನ್ನು ನಮಸ್ಕರಿಸುತ್ತೇನೆ.

## ತ್ರಿಪುರ ಭೈರವೀ

ಚಂಡಮುಂಡರನ್ನು ಸಂಹಾರ ಮಾಡುವ ಸಲುವಾಗಿ ದೇವಿಯು ಭೈರವೀರೂಪವನ್ನು ತಾಳಿದಳು. ಇವಳ ಶಿವನು 'ದಕ್ಷಿಣಾಮೂರ್ತಿ' ಅಥವಾ ಕಾಲಭೈರವ.

**ಉದ್ಯದ್‌ಭಾನುಸಹಸ್ರಕಾಂತಿಮರುಣಕ್ಷೌಮಾಂ ಶಿರೋಮಾಲಿಕಾಂ**
**ರಕ್ತಾಲಿಪ್ತಪಯೋಧರಾಂ ಜಪವಟೀಂ ವಿದ್ಯಾಮಭೀತಿಂ ವರಮ್ ।**
**ಹಸ್ತಾಬ್ಜೈರ್ದಧತೀಂ ತ್ರಿನೇತ್ರವಿಲಸದ್‌ವಕ್ತ್ರಾರವಿಂದಶ್ರಿಯಂ**
**ದೇವೀಂ ಬದ್ಧಹಿಮಾಂಶುರತ್ನಮುಕುಟಾಂ ವಂದೇ ಸುಮಂದ ಸ್ಮಿತಾಮ್ ॥**




ಉದಯಿಸುತ್ತಿರುವ ಸೂರ್ಯನ ಸಾವಿರದಷ್ಟು ಕಾಂತಿ ಯುಳ್ಳ, ಕೆಂಪು ರೇಷ್ಮೆಯ ವಸ್ತ್ರವನ್ನು ಧರಿಸಿರುವ, ಮುಂಡ ಗಳ ಮಾಲೆಯನ್ನು ಧರಿಸಿರುವ, ರಕ್ತದಿಂದ ತೊಯ್ದ ಸ್ತನಗಳುಳ್ಳ, ತನ್ನ ಕರಕಮಲಗಳಲ್ಲಿ ಜಪಮಾಲೆಯನ್ನು ಧರಿಸಿ ವಿದ್ಯೆ, ಅಭೀತಿ ಮತ್ತು ವರ ಎಂಬ ಮುದ್ರೆಗಳನ್ನು ಪ್ರದರ್ಶಿಸುತ್ತಿರುವ, ಮೂರು ಕಣ್ಣುಗ ಳಿಂದಲೂ ಮತ್ತು ಕಾಂತಿಯುಕ್ತವಾದ ವದನಾರವಿಂದದ ಶೋಭೆಯಿಂದಲೂ ಕೂಡಿರುವ, ರತ್ನ ಕಿರೀಟದ ತುದಿಯಲ್ಲಿ ಚಂದ್ರನನ್ನುಳ್ಳ, ಸುಂದರ ಮಂದ ಹಾಸದಿಂದ ಕೂಡಿರುವ ದೇವಿಯನ್ನು ನಮಸ್ಕರಿಸುತ್ತೇನೆ.

## ಉಪಸಂಹಾರ

ದೇವಿಯ ಈ ರೂಪಗಳೆಲ್ಲ ರಹಸ್ಯಮಯವಾಗಿರುವುದು. ದೇವಿಯ ರೂಪದ ಹಿಂದಿರುವ ತತ್ತ್ವವನ್ನು ನುರಿತ ಸಾಧಕ ರಿಂದ ಮಾತ್ರವೇ ಕೇಳಿ ತಿಳಿದುಕೊಳ್ಳಬೇಕು. ತಂತ್ರದಲ್ಲಿ ಸಂಕೇತಗಳಿಗೆ ಪ್ರಾಧಾನ್ಯವಿರುವುದರಿಂದ ನಮ್ಮ ಪ್ರಾಣಿಸಹಜ ಸಂಸ್ಕಾರಯುಕ್ತವಾದ ಮನಸ್ಸಿನಿಂದ ಇವುಗಳಿಗೆ ಅರ್ಥಗಳನ್ನು ಕಲ್ಪಿಸಹೋದರೆ ಭರಿಸಲಾರದ ನಷ್ಟವಾಗುವುದು ನಮಗೇ. ಮೇಲ್ನೋಟಕ್ಕೆ ಈ ದೇವಿಯ ವಿಶಿಷ್ಟರೂಪಗಳ ಹಿಂದಿರುವ ಘಟನೆಗಳು ಬಾಲಿಶವಾಗಿ ಕಂಡರೂ ಅದರ ಹಿಂದೆ ರಹಸ್ಯ ತತ್ತ್ವವು ಅಡಗಿದೆಯೆಂಬುದಾಗಿ ತಿಳಿಯಬೇಕು. ಸಮಸ್ತ ಸೃಷ್ಟಿಯೇ ಭಗವಂತನ ಸಂಕೇತ. ಹಾಗೆ ಒಂದೇ ದೇವಿಯ ಚೈತನ್ಯತತ್ತ್ವವನ್ನು ನಮಗೆ ಮನವರಿಕೆ ಮಾಡಿಕೊಡುವುದೇ ದಶಮಹಾವಿದ್ಯೆಗಳ ಉದ್ದೇಶ. ಇವುಗಳಲ್ಲಿ ಒಂದೊಂದು ಮಹಾವಿದ್ಯೆಯೂ ಒಂದೇ ಶಕ್ತಿಯ ಬೇರೆ ಬೇರೆ ಆಯಾಮಗಳು. ತನ್ನ ಸಂಸ್ಕಾರ ಹಾಗೂ ಅಭಿರುಚಿಗೆ ತಕ್ಕಂತೆ ಆಯಾ ಆಯಾಮಗಳಿಂದ ದೇವಿಯನ್ನು ಶ್ರದ್ಧೆಯಿಂದ ಉಪಾಸನೆ ಮಾಡುತ್ತ ಹೋದರೆ ತನ್ನ ಜೀವನದಲ್ಲಿ ಸಾಧಕನು ಒಂದೇ ದಿವ್ಯತೆಯ ಸಾಕ್ಷಾತ್ಕಾರವನ್ನು ಮಾಡಿಕೊಳ್ಳಬಹುದೆಂಬ ಸಂದೇಶವನ್ನು ದಶಮಹಾವಿದ್ಯೆಯರು ನಮಗೆ ನೀಡುತ್ತಾರೆ.

# ಸ್ವಾಮಿ ಯತೀಶ್ವರಾನಂದ – ನಾವು ಕಂಡಂತೆ




**Swami Yatiswarananda As We Knew Him**
Publisher: Sri Ramakrishna Math
Mylapore, chennai 600 004
Email: mail@chennaimath.org
ಪುಟ : 1550 (2 ಸಂಪುಟ ಸೇರಿ)
ಬೆಲೆ: ₹ 200

**ಸ್ವಾ**ಮಿ ಯತೀಶ್ವರಾನಂದರ ನೆನಪುಗಳಿರುವ ಈ ಆಂಗ್ಲ ಪುಸ್ತಕ ಎರಡು ಸಂಪುಟಗಳಲ್ಲಿದೆ. ಮೊದಲನೆಯ ಸಂಪುಟದಲ್ಲಿ ೭೮೨ ಹಾಗೂ ಎರಡನೆಯದರಲ್ಲಿ ೭೬೮ ಪುಟಗಳಿವೆ.

ಸ್ವಾಮಿ ಯತೀಶ್ವರಾನಂದರು ೧೮೮೯ರಲ್ಲಿ ಜನಿಸಿದರು. ಬಿ.ಎ. ಪದವಿಯ ನಂತರ ಸ್ನಾತಕೋತ್ತರ ವಿದ್ಯಾಭ್ಯಾಸವನ್ನು ಮುಂದುವರಿಸಿದರೂ, ವೈರಾಗ್ಯ ಹೊಂದಿ ೧೯೧೧ರಲ್ಲಿ ಬೇಲೂರು ಮಠ ಸೇರಿದರು. ಶ್ರೀರಾಮಕೃಷ್ಣರ ನೇರ ಶಿಷ್ಯರಲ್ಲಿ ಒಬ್ಬರಾದ ಸ್ವಾಮಿ ಬ್ರಹ್ಮಾನಂದರಿಂದ ಅವರು ಮಂತ್ರೋಪದೇಶ ಪಡೆದರು; ೧೯೧೭ರಲ್ಲಿ ಅವರಿಂದಲೇ ಸಂನ್ಯಾಸ ದೊರೆಯಿತು. ಶ್ರೀಮಾತೆ ಶಾರದಾದೇವಿಯವರ ಆಶೀರ್ವಾದ ಪಡೆದ ಅವರು ಗಿರೀಶಚಂದ್ರ ಘೋಷ್ ಮತ್ತು 'ಶ್ರೀರಾಮಕೃಷ್ಣ ವಚನವೇದ'ದ ಕರ್ತೃ ಮಾಸ್ಟರ್ ಮಹಾಶಯರ ಭೇಟಿ ಮಾಡಿದ್ದರು. ಸ್ವಾಮಿ ತುರೀಯಾನಂದರ ಸೇವೆಮಾಡುವ ಪುಣ್ಯವೂ ಅವರಿಗೆ ಲಭಿಸಿತು. 'ಪ್ರಬುದ್ಧ ಭಾರತ' ಪತ್ರಿಕೆಯ ಸಂಪಾದಕರಾಗಿದ್ದ ಅವರು, ಮುಂಬೈ, ಮದರಾಸು, ಬೆಂಗಳೂರು ಆಶ್ರಮಗಳ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು. ೧೯೨೮ರಲ್ಲಿ ಅವರನ್ನು ಶ್ರೀರಾಮಕೃಷ್ಣ ಮಹಾಸಂಘದ ಟ್ರಸ್ಟಿಗಳನ್ನಾಗಿ ಮಾಡಿದರು. ಹೀಗೆ ರಾಮಕೃಷ್ಣ ಮಹಾಸಂಘ ಅವರಿಗೆ ವಹಿಸಿದ ಜವಾಬ್ದಾರಿಗಳನ್ನು ಅವರು ಸಮರ್ಪಕವಾಗಿ ನಿರ್ವಹಿಸಿದರು. ಆಗ ಮಹಾಸಂಘದ ಅಧ್ಯಕ್ಷರಾಗಿದ್ದ ಸ್ವಾಮಿ ಶಿವಾನಂದರು ೧೯೩೩ರಲ್ಲಿ ಅವರನ್ನು ಯೂರೋಪ್‌ಗೆ ಕಳುಹಿಸಲು ನಿರ್ಧರಿಸಿದರು; ಭಕ್ತರಿಗೆ ಮಂತ್ರದೀಕ್ಷೆಯನ್ನು ಕೊಡುವುದಕ್ಕೆ ಅನುಮತಿಯನ್ನೂ ನೀಡಿದರು. ಸುಮಾರು ೧೨ ವರ್ಷಗಳ ಕಾಲ ಸ್ವಾಮಿ ಯತೀಶ್ವರಾನಂದರು ಯೂರೋಪಿನ ಅನೇಕ ದೇಶಗಳಲ್ಲಿ ಮತ್ತು ಅಮೆರಿಕಾದಲ್ಲಿ ವೇದಾಂತ ಮತ್ತು ಶ್ರೀರಾಮಕೃಷ್ಣರ ಬೋಧನೆಗಳನ್ನು ಪ್ರಚಾರ ಮಾಡಿದರು. ಈ ಕಾಲದಲ್ಲಿ ಅವರನ್ನು ಭೇಟಿಯಾಗಿ, ಆಧ್ಯಾತ್ಮಿಕ ತತ್ತ್ವಗಳನ್ನು ಕುರಿತು ಚರ್ಚಿಸಿ, ನಂತರ ಶ್ರೀರಾಮಕೃಷ್ಣ ಆಶ್ರಮವನ್ನು ಸೇರಿದ ಸ್ವಾಮಿ ಯೋಗೇಶಾನಂದರ ಲೇಖನ ಈ ಸಂಪುಟದಲ್ಲಿದೆ. ಇಲ್ಲಿ ಸ್ವಾಮಿ ಯತೀಶ್ವರಾನಂದರ ವ್ಯಕ್ತಿತ್ವ, ಅವರು ತಾಳ್ಮೆಯಿಂದ ಸಹನೆಯಿಂದ ಆಧ್ಯಾತ್ಮಿಕ ಪ್ರಶ್ನೆಗಳಿಗೆ ಸರಳವಾಗಿ ಉತ್ತರಿಸುವ ವಿಧಾನ ಇವನ್ನು ನಾವು ಕಾಣಬಹುದು. ಆಗಿನ ಕಾಲದ ಯೂರೋಪ್ ಮತ್ತು ಅಮೆರಿಕಾದ ಇತರ ಭಕ್ತರ ಲೇಖನಗಳೂ ಇದರಲ್ಲಿವೆ.

ದೀರ್ಘಕಾಲದ ನಂತರ ಸ್ವಾಮಿ ಯತೀಶ್ವರಾನಂದರು ೧೯೫೦ರಲ್ಲಿ ಭಾರತಕ್ಕೆ ಹಿಂದಿರುಗಿದರು. ಕೆಲವು ಕಾಲ ಬೇಲೂರು ಮಠದಲ್ಲಿ ಇದ್ದರು. ನಂತರ ೧೯೫೧ರಲ್ಲಿ ಬೆಂಗಳೂರಿನ ಆಶ್ರಮಕ್ಕೆ ಅಧ್ಯಕ್ಷರಾಗಿ ಬಂದರು. ಡಿಸೆಂಬರ್ ೧೯೬೫ರ ವರೆಗೂ ಆಶ್ರಮಕ್ಕೆ ದುಡಿದ ಅವರು ಅನಾರೋಗ್ಯದ ನಿಮಿತ್ತ ಬೇಲೂರು ಮಠಕ್ಕೆ ಹೋದರು. ಜನವರಿ ೧೯೬೬ರಲ್ಲಿ ಇಹಲೋಕವನ್ನು ತ್ಯಜಿಸಿದರು. ಬೆಂಗಳೂರು ರಾಮಕೃಷ್ಣ ಆಶ್ರಮಕ್ಕೆ ಬರುವುದಕ್ಕೆ ಮೊದಲೇ ಆಶ್ರಮ ಸೇರಿದ್ದ ಬ್ರಹ್ಮಚಾರಿಗಳು ಇವರಿಂದ ಮಂತ್ರ ದೀಕ್ಷೆ ಪಡೆದರು. ಅನೇಕ ಯುವಕರು ಇವರಿಂದ ಆಕರ್ಷಿತರಾಗಿ ಮಂತ್ರೋಪದೇಶ ಪಡೆದು, ಬೆಂಗಳೂರಿನ ರಾಮಕೃಷ್ಣ ಆಶ್ರಮ ಸೇರಿದರು. ವಿದ್ಯಾವಂತ ಯುವ ಸ್ತ್ರೀಭಕ್ತರು ದೀಕ್ಷೆ ಪಡೆದು ಶ್ರೀಶಾರದಾ ಮಠ ಸೇರಿದರು. ಇತರ ಅನೇಕ ಭಕ್ತರು ಉಪದೇಶ ಪಡೆದು ವಿವಿಧ ಸೇವಾ ಕಾರ್ಯಗಳನ್ನು ಪ್ರಾರಂಭಿಸಿದರು. ಅವುಗಳಲ್ಲಿ ಕೆಲವು ಇಂದಿಗೂ ಸಾಂಗವಾಗಿ ನಡೆದುಕೊಂಡು ಬರುತ್ತಿವೆ. ಈ ಕಾರಣದಿಂದಲೇ ಈ ಸ್ಮೃತಿಸಂಕಲನದಲ್ಲಿ ಕರ್ನಾಟಕದ ಸಾಧುಗಳು, ಸಾಧ್ವಿಯರು ಮತ್ತು ಭಕ್ತರ ಲೇಖನಗಳೇ ಹೆಚ್ಚಾಗಿವೆ; ಬೆಂಗಳೂರು ಆಶ್ರಮದ ಆವರಣದಲ್ಲಿ ತೆಗೆದ ಸ್ವಾಮಿಗಳ ಭಾವಚಿತ್ರಗಳು ಹೆಚ್ಚಾಗಿವೆ.

ಸ್ವಾಮಿ ಯತೀಶ್ವರಾನಂದರು ಬೆಂಗಳೂರು ಆಶ್ರಮದ ಅಧ್ಯಕ್ಷರಾದ ಎರಡು ವರ್ಷಗಳೊಳಗಾಗಿ ಅವರು ಪ್ರಾರಂಭಿಸಿದ ಮೊದಲನೆ ಕಾರ್ಯವೇ 'ವಿವೇಕಾನಂದ ಬಾಲಕ ಸಂಘ'ವನ್ನು ಶ್ರೀಶಾರದಾದೇವಿಯವರ ಜನ್ಮಶತಮಾನೋತ್ಸವ ವರ್ಷವಾದ ೧೯೫೩ರಲ್ಲಿ ಪ್ರಾರಂಭಿಸಿದುದು. ಇದು ಬಾಲಕರಿಗೆ, ಯುವಕರಿಗೆ ಶಿಸ್ತು, ಭಾರತೀಯ ಸಂಸ್ಕೃತಿ–ಧರ್ಮಗಳ ಬಗ್ಗೆ ತರಬೇತಿ ಕೊಟ್ಟಿತು; ನಾಯಕತ್ವವನ್ನು ಎಳೆಯ ವಯಸ್ಸಿನವರಿಗೆ ಕಲಿಸಿ ಕೊಟ್ಟಿತು. ಯತೀಶ್ವರಾನಂದರನ್ನು ನೋಡಲು ಬರುತ್ತಿದ್ದ ಹಿರಿಯ ಭಕ್ತರಿಗೆ ಅವರು, 'ನನಗೆ ನಿಮ್ಮ ಮೊಮ್ಮಕ್ಕಳಲ್ಲಿ ಆಸಕ್ತಿ' ಎಂದು ಹೇಳುತ್ತಿದ್ದರಂತೆ. 'ಬಾಲಕ ಸಂಘ' ಮತ್ತು 'ವಿದ್ಯಾರ್ಥಿ ಮಂದಿರ' ಸ್ವಾಮಿ ಯತೀಶ್ವರಾನಂದರು ಯುವಪೀಳಿಗೆಯ ತರಬೇತಿಗೆ ನೀಡಿದ ಕಾಣಿಕೆ.